Reg No. M 1299 (Founded 1917) Daily & Weekly

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 28 ಸಂಚಿಕೆ 195] ಶನಿವಾರ 28—4—45 [3 ಪೈ

ಮುಸೋಲಿನಿ ಸೆರೆಹಿಡಿಯಲ್ಪಟ್ಟನು

ಸ್ಥಳೀಯ ವಾರ್ತೆಗಳು

ಶ್ರೀ ಚುಂಚೆ ವೈದ್ಯನಾಥ ಭಾಗವತರ ಸಂಗೀತ ಕಛೇರಿಯು ಈ ದಿವಸ ಕೊಚ್ಚಿಯಲ್ಲಿ ಇರುವುದರಿಂದ, ಈ ದಿವಸ ಮೈಸೂರಿನ ಶ್ರೀ ಬಿಡಾರಂ ಕೃಷ್ಣಪ್ಪನವರ ಮುಂದಿರದಲ್ಲಿ ನಡೆಯಬೇಕಾಗಿದ್ದ ಅವರ ಕಛೇರಿಯನ್ನು ಮುಂದುವರಿಸಲಾಗಿದೆಯೆಂದು ತಿಳಿಯಬಂದಿದೆ.

ಮೈಸೂರು ಸಂಸ್ಥಾನದಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತಿರುವ ವಿದ್ಯಾರ್ಥಿಗಳ ಸೆಲಕ್ಷನ್ ಪರೀಕ್ಷೆಯ ಅಂಕಗಳು ಸೆಕ್ರಟರಿಯವರಿಂದ ತರಿಸಿಕೊಳ್ಳಲ್ಪಟ್ಟಿದೆಯೆಂದು ಹೇಳಲಾಗಿದೆ.

ಮೈಸೂರು ಛಾಂಪಿಯನ್ ಮೆಟ್ರೋಪಾಲಿಟನ್ ಕಾಲೇಜ್ ಪ್ರಿನ್ಸಿಪಾಲರಾದ ಶ್ರೀ ಪಿ. ಸುಬ್ಬರಾಯ ಶಾಸ್ತ್ರಿಗಳು ತಮ್ಮ ಮಗ ಚಿ॥ ರಾ॥ ಶ್ರೀಕಂಠುವಿಗೆ ಉಪನಯನ ಮಹೋತ್ಸವವನ್ನು ನಾಳೆ ಬೆಳಿಗ್ಗೆ ನೆರವೇರಿಸುವರು.

ತಿಪಟೂರು ಆರ್ಯಬಾಲಿಕಾ ಪಾಠಶಾಲೆಯಲ್ಲಿ ತಾ 2-5-45 ನೇ ಬುಧವಾರ ಸೆಂಟ್ರಲ್ ಕಾಲೇಜು ಅ॥ ಪ್ರೊ॥ ಫೆಸರ್ ಡಾ॥ ಶೇಷಾಚಾರ್‌ದವರು 'ಪ್ರಾಣಿಶಾಸ್ತ್ರ ಮತ್ತು ಜನಜೀವದ' ಎಂಬ ವಿಷಯದ ಮೇಲೆ ಭಾಷಣಮಾಡುವರು.

ವರ್ತಮಾನ ಸಂಗ್ರಹ

ಮದ್ರಾಸಿನ ಲಕ್ಷ್ಮೀಕಾಂತಂ ಖೂನಿ ಮೊಕದ್ದಮೆಯಲ್ಲಿ ವಿಚಾರಣೆಯೆಲ್ಲಾ ಮುಗಿದು, ಆಗ್ಯುವೆಂಟು ಪಾರ್ಟಿ ರಂಭವಾಗಿದೆ.

ಸ್ಯಾಕ್‌ಫ್ರಾನ್ಸಿಸ್ಕೋದಲ್ಲಿ ಪ್ರಾರಂಭವಾಗಿರುವ ಪ್ರಪಂಚ ರಕ್ಷಣಾ ಸಮ್ಮೇಳನದ ಪ್ರತಿನಿಧಿಗಳನ್ನು ಕುರಿತು 'ಮತ್ತೊಂದು ಯುದ್ಧವು ಅಸಾಧ್ಯವಾಗುವಂತೆ ನೋಡಿ' ಎಂದು ಸಂದೇಶವನ್ನು ಪ್ರೆ॥ ಟ್ರೂಮನ್‌ರವರು ಕೊಟ್ಟಿರುವರು.

ಹಿಟ್ಲರ್‌ಬಿಟ್ಟಿದ ನಿವಾಸ ಒರ್ಚಸ್ಟೆಗಾಡನ್ನಿನ ಮೇಲೆ ಆರ್. ಎ. ಎಫ್. ನವರು ಭಾರಿ ಧಾಳಿ ನಡೆಸಿದರು

ಲಾರ್ಡ್ ವೇವೆಲ್ಲರಿಗೆ ಭಾರತದ ಬಿಕ್ಕಟ್ಟು ಪರಿಹಾರ ಮಾಡಲು ಅಧಿಕಾರ ಕೊಡಬೇಕೆಂದೂ ಇಲ್ಲದಿದ್ದರೆ ನೈಸರಾಯಿ ಸದನಯೇ ಬೇಕಲ್ಲವೆಂದೂ ಮಿ॥ ಚರ್ಚಿಲ್ ಮತ್ತು ಬ್ರಿಟಿಷ್ ವಂತ್ರಿಮಂಡಲಕ್ಕೆ ತಿಳಿಸಲು ಲಂಡನ್ನಿಗೆ ಹೋಗಿರುವುದೆಂದು ಮಿ॥ ಗಿಲ್ಡರ್‌ರು ಬರೆದಿರುತ್ತಾರೆ.

ಒರ್ಲಿನ್ನಿನ ಒಳಭಾಗ ಮತ್ತು ಅದರ ಸುತ್ತಮುತ್ತ ಇರುವ ಕೈಗಾರಿಕಾ ಪ್ರದೇಶಗಳು ರಷ್ಯನ್ನರ ಹಿಡಿತದಲ್ಲಿ ಸಿಕ್ಕಿದವು.

o o

ಬರ್ಲಿನ್ನಿನ ಕದನದಲ್ಲಿ ಇನ್ನೂ ಹಿಟ್ಲರರೇ ನಾಯಕರಾಗಿದ್ದಾರೆಂದು ಹೇಳಲಾಗಿದೆ.

o o

ಹೃದ್ರೋಗದ ದೆಸೆಯಿಂದ ಜರ್ಮನಿಯ ವಿಮಾನ ದಳದ ನಾಯಕತ್ವಕ್ಕೆ ಗೋರಿಂಗ್ ರಾಜೀನಾಮೆ ಇತ್ತಿರುವನೆಂದು ತಿಳಿಯಬಂದಿದೆ.

o o

ದಂಗೆಯು ನಡೆದುದರಿಂದ ಹೆದರಿ ಮುಸೋಲಿನಿಯು ವಿಲಾಸನ್ನು ಬಿಟ್ಟು ಕೋಮೋ ಪಟ್ಟಣಕ್ಕೆ ಓಡಿಹೋದನೆಂದು ವರದಿಯಾಗಿದೆ.

o o

ನಾಜೀ ಜನರ ಕ್ರೂರಕೃತ್ಯವನ್ನು ತೋರಿಸುವ ಚಲನಚಿತ್ರಗಳು ನ್ಯೂಯಾರ್ಕಿನಲ್ಲಿ ಪ್ರದರ್ಶಿಸಲ್ಪಡುವವು.

o o

ಫ್ರಿಸ್ಕೋ ಸಮ್ಮೇಳನಕ್ಕೆ ಬಂದಿರುವ ಪ್ರತಿನಿಧಿಗಳಿಗೂ ಮತ್ತು ಇತರರಿಗೂ ಎಲ್ಲಾ ಅನುಕೂಲಗಳು ಮಾಡಲ್ಪಟ್ಟಿವೆ.

o o

ಭಾರತದಲ್ಲಿ ಒಂದು ಹೋಸೊಪ್ಪಿಸುವ ಸಮಿತಿ ಸ್ಥಾಪನೆಯಾಗಬೇಕೆಂದು ಅದಕ್ಕೆ ವಾರ್ಷಿಕ ಬೆಜ್ಜ 10 ಲಕ್ಷ ರೂಪಾಯಿಗಳನ್ನು ಭಾರತ ಸರಕಾರದವರು ಮಂಜೂರುಮಾಡಿದ್ದಾರೆ.

ಹೊಸಹೊಸ ಸುದ್ದಿ

ರೋಂ, ಏ. 26— ಪಲಾಯನಾತ್ಮಕ ಹತ್ತಿರ ಇಟಲೀ ದೇಶಭಕ್ತರು ಮುಸೋಲಿನಿಯನ್ನು ಸೆರೆಹಿಡಿದಿರುವರೆಂದು ಸ್ವಿಸ್ ಟೆಲಿಗ್ರಾಫ್ ಏಜನ್ಸಿ ವರ್ತಮಾನ ತಿಳಿಸುತ್ತದೆ.

ಜರ್ಮನಿಯ ಬಾಲ್ಟಿಕ್ ರೇವುಪಟ್ಟಣ ಸ್ಟೆಟ್ಟಿನ್ ರಷ್ಯನ್ನರ ವಶವಾಯಿತು.

ನಾಜಿಗಳು ತಮ್ಮ ಕೇಂದ್ರ ಸ್ಥಾನವನ್ನು ಪ್ರೇಗಿಗೆ ಬದಲಾಯಿಸಿಕೊಳ್ಳಬಹುದೆಂದು ಹೇಳಲಾಗಿದೆ.

ಮಿತ್ರರು ಬರ್ಮಾದಲ್ಲಿ ಟೊಗೋವನ್ನು ಆಕ್ರಮಿಸಿರುವರು. ಮಿತ್ರರು 21 ದಿನಗಳಲ್ಲಿ 160 ಮೈಲಿ ಮುಂದುವರಿದಿರುವರು.

ಫ್ರಿಸ್ಕೋ ಸಮ್ಮೇಳನಕ್ಕೆ ಸ್ವಾಮಿನ್ಸರು ಖಾಯಂ ಅಧ್ಯಕ್ಷರಾಗಿರುವುದಕ್ಕೆ ರಷ್ಯಾ ಪ್ರತಿನಿಧಿ ಮಾಲ್ಟೋವನು ಪ್ರತಿಭಟಿಸಿದ್ದಾರೆ.

ಡ್ಯೂಕ್ ಆಫ್ ವಿಂಡ್ಸರರು ಭಾರತದ ಮುಂದಿನ ವೈಸರಾಯರಾಗಬಹುದೆಂದು ಹೇಳಲಾಗಿದೆ.

ಕಾರ್ವಾರ ತಾಲ್ಲೂಕ ಪ್ರೈಮರೀ ಸ್ಕೂಲು ಉಪಾಧ್ಯಾಯರ ಸಂಘದವರು ಅಲ್ಲಿನ ಡಿ। ಬೋರ್ಡು ಅಧ್ಯಕ್ಷರು (1) ತಮಗೆ ಬರುವ ಸಂಬಳ ಸಾಲದುದರಿಂದ ಪ್ರತಿ ಶನಿವಾರ ಬೆಳಿಗ್ಗೆ ಭಿಕ್ಷೆ ಬೇಡಲು ಅನುಮತಿ ಕೊಡಬೇಕೆಂದೂ (2) ತಮಗೆ ಸಂಬಳವನ್ನು ತಿಂಗಳ ಮೊದಲನೇ ತಾರೀಖಿನ ದಿನವೇ ಕೊಡಬೇಕೆಂದೂ, ಶಂಖವು ಮಾಡಿರುವರು.

ನಾಳೆ ಸಂಜೆ ಬನುಮಯ್ಯನವರ ಹೈ ಸ್ಕೂಲಿನಲ್ಲಿ

ಮೈಸೂರು ಕೊಆಪರೇಟಿವ್ ಸೊಸೈಟಿ ಡೈರೆಕ್ಟರುಗಳ ಚುನಾವಣೆ

— ನಿಮ್ಮ ಓಟನ್ನು —

ಜಿ. ವಿ. ಸೂರ್ಯನಾರಾಯಣ ಶೆಟ್ಟಿ

ಜೂಯೆಲರ್, ರೆಡಿ ಮೇಡ್ ಕ್ಲಾತ್ ಮರ್ಚೆಂಟ್

ಸಯ್ಯಾಜೆರಾವ್ ರೋಡ್, ಮೈಸೂರು

ಇವರಿಗೆ ತಪ್ಪದೇ ಕೊಡಿ

ಓಟಿಂಗ್ ಲಿಸ್ಟಿನಲ್ಲಿ ಕಡೆಯ ನಂಬರು

ನಂ. 27

ವಿವಿಧ ವರ್ತಮಾನ

ಬರ್ಮಾಕ್ಕೆ ಇಲ್ಲೀವರೆಗೆ 282 ಸಾರಿ ಬಾಂಬು ಹಾಕಲ್ಪಟ್ಟಿದೆ.

o o

ಸಂಯುಕ್ತ ಅಮೇರಿಕಾದಲ್ಲಿ ಈ ಸಾರಿ ಅಗಾಧ ಗೋಧಿ ಬೆಳೆಯಾಗಿದೆ.

o o

ಬೊಂಬಾಯಿನಲ್ಲಿ 633 ಒಪ್ಪೇ ಅಂಗಡಿಗಳ ಮೇಲೆ 4 ಧಾಳಿ ಸಡೆಸಿ 20000 ಗಜ 'ಕಾಲಾತೀತ' ವಾದ ಬಟ್ಟೆಗಳನ್ನು ಬಟ್ಟೇ ಇನ್‌ಸ್ಪೆಕ್ಟರು ವಶಪಡಿಸಿಕೊಂಡರು.

o o

ಶಿಕಾರಿಪುರದ ಒಂದು ಅಕ್ಕೀ ಗಿರಣಿಗೆ ಬೆಂಕಿ ಬಿದ್ದು ರೂ. 3 ಲಕ್ಷ ನಷ್ಟವಾಯಿತು

o o

ಅಲಿಘಡದ ವಿಶ್ವವಿದ್ಯಾನಿಲಯಕ್ಕೆ ಪರ್ಭಂಗಾ ಮಹಾರಾಜರು ಈ ಚೆಗೆ ಭೇಟಿ ಕೊಟ್ಟಾಗ ಆ ವಿಶ್ವವಿದ್ಯಾನಿಲಕ್ಕೆ ರೂ. 50000 ದಾನಾ ಮಾಡಿದರು.

ಜಪಾನಿನ ಮೇಲಿನ ಯುದ್ಧ ಈ ವರ್ಷ ಮುಗಿಯಬಹುದೆಂದು ಆಸ್ಟ್ರೇಲಿಯಾ ಮಂತ್ರಿಯವರು ಅಭಿಪ್ರಾಯ ಪಟ್ಟಿದ್ದಾರೆ.

ರಷ್ಯಾದ ಸಿದ್ಧತೆ

ರಷ್ಯಾದಲ್ಲಿ ಸ್ಟಾಲಿನ್ನರು ಕಾರ್ಖಾನೆಗಳನ್ನು ಭದ್ರ ಪಡಿಸಿಕೊಳ್ಳುತ್ತಿರುವರು. ಹಿಂದೆ ಜರ್ಮನಿಯು ರಷ್ಯಾದಲ್ಲಿ ಮಂದುವರಿದುಕೆಲವ್ಲಾ ಅಲ್ಲಲ್ಲಿ ತೊಳ್ಳೇಕೊಡೆದು ಕಾರ್ಖಾನೆಗಳನ್ನು ಸ್ಥಾಪಿಸಿದ್ದಿತು. ಸ್ಟಾಲಿನ್ನರು ಇವನ್ನೆಲ್ಲಾ ಅಲ್ಲಲ್ಲೇ ಇಟ್ಟು ಕೆಲಸ ನಡೆಸುತ್ತಿರುವರು. ಇತರ ಕಡೆಗಳಲ್ಲಿ ಹೊಸದಾಗಿ ಯಂತ್ರಗಳನ್ನು ಜೋಡಿಸುತ್ತಿರುವರು. ಯಂತ್ರಗಳನ್ನು ಬೇರೆಬೇರೆಯಾಗಿ ತಯಾರ್ಮಾಡುತ್ತಿರುವರು. ಪೂರ್ವ ದಿಕ್ಕಿನಲ್ಲಿಯೂ ಪಶ್ಚಿಮ ದಿಕ್ಕಿನಲ್ಲಿಯೂ ಕಾರ್ಖಾನೆಗಳ ಸಂಖ್ಯೆ ದಿನದಿನಕ್ಕೆ ಹೆಚ್ಚುತ್ತಿದೆ. ಯುದ್ಧಕ್ಕೆ ಬೇಕಾದ ಸಲಕರಣೆಗಳನ್ನು ಸಿದ್ಧಪಡಿಸಿಕೊಳ್ಳುತ್ತಿದೆ. ಶೀತ ತರಹದ ಉಕ್ಕು, ಸ್ಟೀಡಿಯಂ ಲೋಹಕ್ಕೆ ಸಮಂವಾಗಿ ತಯಾರಾಗುತ್ತಿದೆ. ಶೆಲ್ಲುಗಳು, ಬಾಂಬುಗಳೂ, ಕ್ಷೇಪಣಿಗಳೂ, ವೈಮಾನಿಕ ಉತ್ಪಾತ ಯಂತ್ರಗಳೂ, ಮೋಟಾರು ಟ್ರಕ್ಕುಗಳೂ ಇವನ್ನೆಲ್ಲಾ ಅಲ್ಲಿ ತಯಾರಾಗುತ್ತಿದೆಯಂತೆ.

AT OPERA — 3 ನೇ ವಾರ

POOMPAVAI

'ಪೂಂಪಾವೈ'

ಚಿತ್ರ - ರಾಮುಸ್ವಾಮಿ, ಜೀವರತ್ನಂ, ಮಧುರಂ, ಕೃಷ್ಣ

Morning Shows, From 27—4—45 YOUNG TOM EDISON

ರ ಕ್ತ ವೃ ದ್ಧಿ ಗೆ — ಧಾ ತು ಪು ಷ್ಟಿ ಗೆ

ಶ ಕ್ತಿ ಸು ಧಾ

ಸೇವನೆಯೇ ಸುಲಭೋಪಾಯ

ಶಕ್ತಿಸುಧಾ, ೧೦೬೭ ಚಾಮರಾಜಪುರಂ - ಮೈಸೂರು.

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಸ ತ್ಯ ವಾ ದಿ

ಸತ್ಯವಾದಿ ಪಾರಮಾರ್ಥಿಕ ವಿಷಯಕ್ಕೆ ಸಂಬಂಧಪಟ್ಟ ಎಲ್ಲಾ ಊರುಗಳಲ್ಲೂ ವಿಜಂಟರುಗಳು ಬೇಕಾಗಿದ್ದಾರೆ. ಹೆಚ್ಚಿನ ವಿಷಯಗಳಿಗೆ ಬರೆಯಿರಿ.

ಮ್ಯಾನೇಜರ್, ಸತ್ಯವಾದಿ

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಅಂದಾದ ಮುದ್ರಣ ಕೆಲಸಕ್ಕೆ

ಧನಲಕ್ಷ್ಮಿ ಪ್ರೆಸ್

ಮೈಸೂರು

ಅ ರ ಕ್ಷ ಣೆ

ಸಾ ಮಾ ಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

For Good Printing—

L. N. Press

Sriramp t MYSORE

೨ ನೇ ಅಮೇರಿಕನ್ ರೂಕ್ ಪ್ರದೇಶವನ್ನು ದಾಟುತ್ತಿರುವುದರ ಚಿತ್ರ.

ಮೈಸೂರು ಸಿಟಿ ರೇಷನಿಂಗ್

1945 ನೇ ಏಪ್ರಿಲ್ 30 ನೇ ತಾರೀಖು ಸರ್ಕಾರಿ ಡಿಪೋ ಮತ್ತು ಸಬ್ ಗೋಡೌನ್‌ಗಳಲ್ಲಿರುವ ದಿನಸಿಗಳ ಎಣಿಕೆ ಮಾಡಬೇಕಾಗಿರುವುದರಿಂದ ಮೈಸೂರು ಸಿಟಿಯಲ್ಲಿರುವ ಎಲ್ಲಾ ಮೊಹಲ್ಲಾ ಸಬ್ ಗೋಡೌನ್‌ಗಳೂ ಸರ್ಕಾರಿ ಇತರ ಎಲ್ಲಾ ಡಿಪೋಗಳು ಮತ್ತು ಲೈಸೆನ್ಸ್ ಪಡೆದ ವರ್ತಕರ ಡಿಪೋಗಳು ಸಹ ಈ ದಿನ ಮುಚ್ಚಲ್ಪಡುತ್ತವೆ.

(ಸಹಿ) ಟಿ. ವಿ. ರೆಡ್ಡಿ

ಮೈಸೂರು ರೇಷನಿಂಗ್ ಆಫೀಸರ್

ತಾ|| 25-4-45 ಮೈಸೂರು ಸಿಟಿ



ಐ.ಜೆ. ಹಾಲ್, ಸರಾಫ್ ಅಂಗಡಿ

ರವೇ ಬೀದಿ, ಮೈಸೂರು

2 ನೇ ವಾರ

At Ranjit

Police

ಪ್ರೇಂ ಆದಿಬ್ — ರತ್ನಮಾಲಾ

ರಂಜಿತ್ — ಜೀವನ್

ಮುಂತಾದವರು ಪಾತ್ರವಹಿಸಿರುವ

ಪೋಲೀಸ್

(ಹಿಂದಿ)